# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 686(825)

ಸದಸ್ಯರ ಹೆಸರು : ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 15.12.2020

ಉತ್ತರಿಸುವವರು : ಗಣಿ ಮತ್ತು ಭೂವಿಜ್ಞಾನ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯಲ್ಲಿನ ವಿಶ್ವ ಪ್ರಸಿದ್ಧಿಯಾದ ಕೆ.ಜಿ.ಎಫ್.ನ ಚಿನ್ನದ ಗಣಿಯನ್ನು ಮುಚ್ಚಲು ಕಾರಣಗಳೇನು; ಇದರಿಂದ ಇದುವರೆವಿಗೂ ಆದ ನಷ್ಟದ ವಿವರ ಒದಗಿಸುವುದು; | ಮ\|\| ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಕಂಪನಿಯು ಭಾರತ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿದ್ದು, (ಕೆ.ಜಿ.ಎಫ್.) ಸದರಿ ಕಂಪನಿಗೆ ಚಿನ್ನದ ನಿಕ್ಷೇಪ ತೆಗೆಯಲು ಗಣಿ ಗುತ್ತಿಗೆ 2191 ಅನ್ನು ಮಂಜೂರು ಮಾಡಲಾಗಿದೆ. ಆದರೆ ಸದರಿ ಗಣಿಗುತ್ತಿಗೆಯನ್ನು ಫೆಬ್ರವರಿ 2001ರಿಂದ ಆರ್ಥಿಕ ಮತ್ತು ಪರಿಸರದ ಕಾರಣಗಳಿಗಾಗಿ ಗಣಿಗಾರಿಕೆಯ ಕಾರ್ಯವನ್ನು ಸ್ಥಗಿತಗೊಳಿಸಿ ನಿಷ್ಕ್ರಿಯವಾಗಿರಿಸಿದೆ. ಇದರಿಂದ ಇದುವರೆವಿಗೂ ಆದ ನಷ್ಟದ ವಿವರಗಳು ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ. |
| ಆ) | ಕೋಲಾರ ಚಿನ್ನದ ಗಣಿ ಪುನಶ್ಚೇತನದ ಪ್ರಕ್ರಿಯೆ ಸರ್ಕಾರದ ಮುಂದಿದೆಯೇ; | ಈ ಉದ್ದಿಮೆಯು ಕೇಂದ್ರ ಸರ್ಕಾರದ ಉದ್ದಿಮೆಯಾಗಿದ್ದು, ಇದರ ನಿರ್ವಹಣೆ ಕೇಂದ್ರ ಸರ್ಕಾರವು ಮಾಡುತ್ತದೆ. ಗಣಿಗಾರಿಕೆ ಪುನರ್ ಪ್ರಾರಂಭಿಸುವುದು ಸಹ ಕೇಂದ್ರ ಸರ್ಕಾರದ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.<br><br>ಮುಂದುವರೆದು, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಗಣಿ, ಕಲ್ಲಿದ್ದಲು ಹಾಗು ಸಂಸದೀಯ ವ್ಯವಹಾರಗಳ ಕೇಂದ್ರ ಸಚಿವರು ಇವರ ಜಂಟಿ ಅಧ್ಯಕ್ಷತೆಯಲ್ಲಿ ದಿನಾಂಕ 28.8.2020 ರಂದು ನಡೆದ ಸಭೆಯಲ್ಲಿ ಬಿ.ಜಿ.ಎಂ.ಎಲ್ ಕಂಪನಿಯ ಒಡೆತನದಲ್ಲಿರುವ ಭೂಮಿಯನ್ನು ಉಪಯೋಗಿಸುವ ಕುರಿತು ಸಭೆ ನಡೆಸಲಾಗಿದ್ದು, ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.<br><br>1. Exploration survey be taken up by the MECL at their cost to be completed within six months of the entire unexplored of BGML<br>2. The State Government to take up total station survey of the entire BGML land to be completed within three months.<br>3. If the land identified to be not suitable for mineral exploitations, the same would be considered for grant to the State Government for development of Industrial Township to the extent of clear vacant land. |
| ಇ) | ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಚಿನ್ನದ ಗಣಿಯನ್ನು ಪುನರ್ ಪ್ರಾರಂಭಿಸಲಾಗುವುದು ? | ಕೋಲಾರದ ಚಿನ್ನದ ಗಣಿ ಪ್ರದೇಶದ ಡ್ರೋಣ್ ಸರ್ವೆ ಕಾರ್ಯ ಮಾಡಿ, ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಸಿರುವುದು ಕಂಡುಬರುತ್ತದೆ. ಮುಂದುವರೆದು, ಎಂ.ಇ.ಸಿ.ಎಲ್. ಸಂಸ್ಥೆಯು ಗಣಿ ಖನಿಜಾನ್ವೇಷಣೆ ಸರ್ವೆ ಕಾರ್ಯ ಕೈಗೊಂಡಿದ್ದು, ಮಾರ್ಚ್ 2021ರೊಳಗೆ ಸದರಿ ಕಾರ್ಯವನ್ನು ಪೂರ್ಣಗೊಳಿಸಿ Geological Report ಸಲ್ಲಿಸಿದ ನಂತರ ಗಣಿಗಾರಿಕೆಯನ್ನು ಪ್ರಾರಂಭಿಸುವ ಕುರಿತಂತೆ ಕೇಂದ್ರ ಸರ್ಕಾರವು ನಿರ್ಧರಿಸಬೇಕಾಗಿದೆ. |

ಸಂಖ್ಯೆ: ಸಿಐ 117 ಸಿಎಂಸಿ 2020

(ಸಿ.ಸಿ. ಪಾಟೀಲ್)
ಗಣಿ ಮತ್ತು ಭೂವಿಜ್ಞಾನ ಸಚಿವರು